2019 ಕ.ತೀ.ವ 488

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎಸ್. ಬೋಪಣ್ಣ
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಮೊಹಮ್ಮದ್ ನವಾಜ್

ಫಯಾಜ್ ಅಹಮದ್ ಶೇಖ್ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಮತ್ತೊಬ್ಬರು*

ಕರ್ನಾಟಕ ಸಿವಿಲ್ ಸೇವೆಗಳು (ನಡತೆ) ನಿಯಮಗಳು, 1966ರ 3(1)ನೇ ನಿಯಮದ ಮೇರೆಗಿನ ದುರ್ನಡತೆ.

ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ 12(3)ನೇ ಪ್ರಕರಣದ ಮೇರೆಗೆ ಶಿಸ್ತು ಕ್ರಮದ ವ್ಯವಹರಣೆಗಳನ್ನು ನಡೆಸಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು.

ಈ ರಿಟ್ ಅರ್ಜಿಯಲ್ಲಿ, ಅರ್ಜಿದಾರರು ಮೊದಲ ಪ್ರತ್ಯರ್ಜಿದಾರರು ದಿನಾಂಕ: 19.10.2017ರಂದು ಸಂಖ್ಯೆ: ಸಿಐ 05 ಎಂಜಿಎಸ್ 2017 ಬೆಂಗಳೂರು ಇದರಲ್ಲಿ ಈ ರಿಟ್ ಅರ್ಜಿಯಲ್ಲಿ ಲಗತ್ತಿಸಲಾಗಿರುವ ಅನುಬಂಧ–ಎ ಯಲ್ಲಿ ಹೊರಡಿಸಿದ ಆದೇಶವನ್ನು ಮತ್ತು 2ನೇ ಪ್ರತ್ಯರ್ಜಿದಾರರು ದಿನಾಂಕ: 31.12.2016ರಂದು ಸಂಖ್ಯೆ: ಸ.ಪ್ರಾ/ ಉ.ಲೋ./ಬಿಜಿಎಂ–964/2016/ಎಆರ್‌ಇ–5ರಲ್ಲಿ ಈ ರಿಟ್ ಅರ್ಜಿಯಲ್ಲಿ ಹಾಜರುಪಡಿಸಿರುವ ಅನುಬಂಧ–ಬಿ ಯಲ್ಲಿ ಹೊರಡಿಸಿದ ಪ್ರಶ್ನಿತ ಆದೇಶವನ್ನು ವಜಾಗೊಳಿಸಿ, ಸರ್ಷಿಯೋರೆರಿ ರೂಪದ ರಿಟ್ ಅನ್ನು ಹೊರಡಿಸುವಂತೆ ಕೋರಿರುತ್ತಾರೆ.

ಅನುಬಂಧ'–ಬಿ ಯಲ್ಲಿರುವ ಆದೇಶವನ್ನು 2ನೇ ಪ್ರತ್ಯರ್ಜಿದಾರರು ದಿನಾಂಕ:31.12.2016ರಂದು ಹೊರಡಿಸಿರುವ ಆದೇಶವನ್ನು ಶ್ರೀ ಸಂಗಮೇಶ್ ಬಸಪ್ಪ ಜಂಗಲಿ ಅವರ ದಾಖಲಿಸಿದ ದೂರಿಗೆ ಮತ್ತು ಬಾಗಲಕೋಟೆ, ಲೋಕಾಯುಕ್ತ ಪೊಲೀಸ್ ಅಧೀಕ್ಷಕರ ವರದಿ ಮತ್ತು ವರದಿಯನ್ನು ಸ್ವೀಕರಿಸಿದ ನಂತರ ವಸ್ತು ವಿಷಯದ

*ರಿಟ್ ಅರ್ಜಿ ಸಂ. 2199/2018 (ಜಿಎಂ–ಕೆಎಲ್‌ಎ), ದಿನಾಂಕ 16ನೇ ಆಗಸ್ಟ್, 2018.

ಸಂಗತಿಯು ಮೇಲ್ನೋಟದಲ್ಲಿ ವರದಿಯಲ್ಲಿ ಕಂಡು ಬಂದಿರುವುದರಿಂದ ಲೋಕಾಯುಕ್ತ ಪೋಲೀಸರು ಆದೇಶವನ್ನು ಹೊರಡಿಸಿರುವರು. ಇಲ್ಲಿ ಅರ್ಜಿದಾರರಾದ ಭೂಗರ್ಭ ಶಾಸ್ತ್ರಜ್ಞರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬಾಗಲಕೋಟೆ ಇವರು ಕರ್ನಾಟಕ ಸಿವಿಲ್ ಸೇವೆಗಳು (ನಡತೆ) ನಿಯಮಗಳು, 1966 [ಸಂಕ್ಷಿಪ್ತವಾಗಿ "ನಿಯಮಗಳು 1966"] 3(1)ನೇ ನಿಯಮಗಳ ಅಡಿಯಲ್ಲಿ ಎಸಗಿದ ದುರ್ನಡತೆ ಕೃತ್ಯದಿಂದ ಮತ್ತು ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 [ಸಂಕ್ಷಿಪ್ತವಾಗಿ ಲೋಕಾಯುಕ್ತ ಅಧಿನಿಯಮ]ದ 12(3)ನೇ ಪ್ರಕರಣದ ಅಡಿಯಲ್ಲಿ ಸಕ್ಷಮ ಪ್ರಾಧಿಕಾರ ಮಾಡಿದ ಶಿಫಾರಸ್ಸಿನ ಮೇಲೆ, ಅರ್ಜಿದಾರರ ವಿರುದ್ಧ ಶಿಸ್ತು ಕ್ರಮವನ್ನು ಕೈಗೊಳ್ಳಲು ಮತ್ತು ಕರ್ನಾಟಕ ಸಿವಿಲ್ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957 [ಸಂಕ್ಷಿಪ್ತವಾಗಿ '1957 ನಿಯಮಗಳು'] 14–ಎ ನಿಯಮದ ಅಡಿಯಲ್ಲಿ ವಿಚಾರಣೆಯನ್ನು ನಡೆಸುವುದಕ್ಕೆ 2ನೇ ಪ್ರತ್ಯರ್ಜಿದಾರರು ಆದೇಶವನ್ನು ಹೊರಡಿಸಿರುವರು. ಮುಂದುವರೆದು, ಆದೇಶದಲ್ಲಿ ಲೋಕಾಯುಕ್ತ ಅಧಿನಿಯಮದ 12(4) ಪ್ರಕರಣದ ಅನುಸಾರವಾಗಿ, ವರದಿಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ಈ ವರದಿಯ ಆಧಾರದ ಮೇಲೆ ತೆಗೆದುಕೊಳ್ಳಬೇಕಾದ ಅಥವಾ ತೆಗೆದುಕೊಳ್ಳುವ ಕ್ರಮಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸೂಚಿಸಲು ನಿರ್ದೇಶಿಸಿದೆ.

ಅನುಬಂಧ–ಎ ಯಲ್ಲಿರುವ ದಿನಾಂಕ: 19.10.2017ರಂದು 1ನೇ ಪ್ರತ್ಯರ್ಜಿದಾರರು ಹೊರಡಿಸಿದ ಆದೇಶದಲ್ಲಿ ಅರ್ಜಿದಾರರ ಮೇಲೆ ಬಂದಿರುವ ದೂರು ಮತ್ತು ವರದಿಯನ್ನು ಪರಿಗಣನೆಗೆ ತೆಗೆದುಕೊಂಡು ಹೊರಡಿಸಿದ ಆದೇಶವನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕರು ಮತ್ತಷ್ಟು ವರದಿಯನ್ನು ಉಪ ಲೋಕಾಯುಕ್ತ 1 ಅವರಿಗೆ 1957ರ ನಿಯಮಗಳ 14–ಎ ನಿಯಮದ ಪ್ರಕಾರ ಮತ್ತು ಲೋಕಾಯುಕ್ತ ಅಧಿನಿಯಮದ 12(4)ನೇ ಪ್ರಕರಣದ ಅಡಿಯಲ್ಲಿ ತನಿಖೆ ನಡೆಸುವುದಕ್ಕೆ ಮತ್ತು ತದಾನುಸಾರದ ಆದೇಶಗಳನ್ನು ಹೊರಡಿಸುವುದಕ್ಕೆ ಉಪ ಲೋಕಾಯುಕ್ತ 1 ಅವರಿಗೆ ಹಸ್ತಾಂತರಿಸಿರುವರು. ಅನುಬಂಧ–'ಆರ್'ನಲ್ಲಿ ಲಗತ್ತಿಸಿದ ದೂರನ್ನು ಗಮನಿಸಿದಾಗ, ದೂರುದಾರನು ಮಾಡಿರುವ ಕೆಲವೊಂದು ನಿರ್ದಿಷ್ಟ ಆರೋಪಗಳೆಂದರೆ, ನಿಯಮಗಳನ್ನು ಅನುಸರಿಸದೆ ಕಾನೂನು ಬಾಹಿರವಾಗಿ ಸೈಜ್ ಗಲ್ಲುಗಳನ್ನು ಸಂಗ್ರಹಿಸಿದ್ದಾನೆ ಮತ್ತು ಒತ್ತುವರಿ ಭೂಮಿಯಲ್ಲಿ ಅಂದರೆ ಗಣಿಗಾರಿಕೆ ಮಾಡಲು ಅನುಮತಿ ನೀಡದ ಪ್ರದೇಶದಲ್ಲಿ ಕಾನೂನು

ಬಾಹಿರವಾಗಿ ಕಲ್ಲು ಗಣಿಗಾರಿಕೆಯನ್ನು ನಡೆಸುತ್ತಿದ್ದಾನೆ ಎಂಬುದಾಗಿದೆ. ಈ ಸಂಬಂಧದಲ್ಲಿ ವಿಚಾರಣೆಯ ಅವಧಿಯಲ್ಲಿ, ಇದರಲ್ಲಿ ಅರ್ಜಿದಾರನಾಗಿರುವ ಅಂದರೆ ಭೂಗರ್ಭ ಶಾಸ್ತ್ರಜ್ಞ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬಾಗಲಕೋಟೆ ಇವನು ಗಣಿಗಾರಿಕೆ ಪ್ರದೇಶವನ್ನು ಪರಿಶೀಲಿಸುವ ಕರ್ತವ್ಯವನ್ನು ನಿರ್ವಹಿಸುವಲ್ಲಿ ವಿಫಲನಾಗಿರುವುದು ಕಂಡು ಬರುತ್ತದೆ ಮತ್ತು ಅವನು ಅಂಥ ಕಾನೂನು ಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸುವುದಕ್ಕೆ ವಿಫಲವಾಗಿರುವುದು ಕಂಡು ಬರುತ್ತದೆ. ಹಾಗೆಯೇ ಸಂಬಂಧಪಟ್ಟ ಭೂಗರ್ಭ ಶಾಸ್ತ್ರಜ್ಞನು ಅಂಥ ಒತ್ತುವರಿ, ಮುಂತಾದ ಸಂಬಂಧಿಸಿದಂತೆ ಕ್ರಮಗಳನ್ನು ತೆಗೆದುಕೊಳ್ಳುವುದು ಅವನ ಕರ್ತವ್ಯವಾಗಿರುತ್ತದೆ.

ಮೇಲೆ ಹೇಳಲಾದ ಅಂಶಗಳ ಹಿನ್ನೆಲೆಯಲ್ಲಿ, ದೂರಿನಲ್ಲಿ ಮಾಡಲಾದ ದೃಢೋಕ್ತಿ ಸ್ವರೂಪದ ಸಂಗತಿಗಳು ಪರಿಭಾಷಿಸಲಾದ "ಕುಂದುಕೊರತೆ" ವ್ಯಾಪ್ತಿಯೊಳಗೆ ಬರುವುದಿಲ್ಲ. ಆದರೆ ಲೋಕಾಯುಕ್ತ ಅಧಿನಿಯಮದ 2(2)ನೇ ಪ್ರಕರಣದ ಅಡಿಯಲ್ಲಿ ಪರಿಭಾಷಿಸಲಾದ ಆಪಾದನೆಗಳು ಸ್ವರೂಪದ ವ್ಯಾಪ್ತಿಯೊಳಗೆ ಈ ಸಂಗತಿಗಳು ಬರುತ್ತವೆ. ಅದು ಹಾಗಿರುವಾಗ, ಲೋಕಾಯುಕ್ತ ಅಧಿನಿಯಮದ 8ನೇ ಪ್ರಕರಣದ ಅಂಶಗಳಲ್ಲಿ 2ನೇ ಪ್ರತ್ಯರ್ಜಿದಾರನು ತನಿಖೆ ನಡೆಯುವುದಕ್ಕೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲವೆಂದು ಹೇಳಲು ಅದು ಸಹಾಯಕ್ಕೆ ಬರುವುದಿಲ್ಲ. ಅರ್ಜಿದಾರನಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಸಕ್ಷಮ ಪ್ರಾಧಿಕಾರ ಮಾತ್ರವೇ ಸಂಬಂಧಪಟ್ಟ ಅರ್ಜಿದಾರನು ಕೆಎಂಎಂಸಿ ನಿಯಮಗಳ 6(3)ನೇ ನಿಯಮದ ಅಡಿಯಲ್ಲಿ ಉದ್ದೇಶಿತ ಪ್ರಕ್ರಿಯೆಯನ್ನು ಅನುಸರಿಸಿ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರ ಹೊಂದಿದೆ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

ಲೋಕಾಯುಕ್ತ ಅಧಿನಿಯಮದ 9(5)ನೇ ಪ್ರಕರಣವು ವಿವೇಚನಾಧಿಕಾರದ ಬಗ್ಗೆ ವ್ಯವಹರಿಸುತ್ತದೆ. ಪ್ರಸಕ್ತ ಮೊಕದ್ದಮೆಯಲ್ಲಿ ದೂರಿನಲ್ಲಿರುವ ದೃಢೋಕ್ತಿಯನ್ನು ಪರಿಗಣಿಸಿ, ಪ್ರತ್ಯರ್ಜಿದಾರ ಸಂಖ್ಯೆ:1 ಮತ್ತು 2ರ ಮೇಲೆ ವಿಚಾರಣೆ ನಡೆಸಿದ ಪ್ರಕ್ರಿಯೆಯ ಕ್ರಮವನ್ನು ಕಾನೂನುಬಾಹಿರವೆಂದು ಅಥವಾ ಅಧಿಕಾರ ವ್ಯಾಪ್ತಿಯ ಹೊರತಾದುದು ಎಂದು ಹೇಳಲು ಬರುವುದಿಲ್ಲ. ದೂರಿನಲ್ಲಿ ಮಾಡಲಾದ ಆಪಾದನೆಗಳು ಸತ್ಯವೆಂದು ಅಥವಾ ಸುಳ್ಳೆಂದು ಖಚಿತಪಡಿಸಿಕೊಳ್ಳುವುದು ವಿಚಾರಣೆಯ ವ್ಯಾಪ್ತಿಯಾಗಿರುತ್ತದೆ.

**ಮೇಲೆ ಮಾಡಲಾದ ಚರ್ಚೆಯ ಹಿನ್ನೆಲೆಯಲ್ಲಿ, ನಮಗೆ ಭಾರತದ ಸಂವಿಧಾನದ 226ನೇ ಅನುಚ್ಛೇದದ ಅಡಿಯಲ್ಲಿ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಈ ಮೊಕದ್ದಮೆಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಕಾರಣಗಳು ಕಂಡು ಬರುತ್ತಿಲ್ಲ.**

**ತದನುಸಾರವಾಗಿ ಈ ರಿಟ್ ಅರ್ಜಿಯನ್ನು ಯಾವುದೇ ಗುಣಾರ್ಹತೆ ಹೊಂದಿಲ್ಲವೆಂದು ಅರ್ಜಿಯನ್ನು ವಜಾಗೊಳಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. ಐಎಲ್‌ಆರ್ 2015 ಕರ್ನಾಟಕ 5591*
*ಮೆ॥ ಕುಮಾರಸ್ವಾಮಿ ಖನಿಜಗಳ ರಫ್ತು*
*ಪ್ರೈವೇಟ್ ಲಿಮಿಟೆಡ್ –ವಿರುದ್ಧ–*
*ಕರ್ನಾಟಕ ರಾಜ್ಯ ಮತ್ತು ಇತರರು (ಉಲ್ಲೇ) 8*
*2. ರಿ.ಅ. ಸಂಖ್ಯೆ: 48876/2015 (ಜಿಎಂ–ಕೆಎಲ್‌ಎ)*
*ಮಿಲಿಂದ ವಿದ್ಯಾ ಸಂಸ್ಥೆ (ನೋ) –ವಿರುದ್ಧ–*
*ಕರ್ನಾಟಕ ರಾಜ್ಯ ಮತ್ತು ಇತರರು (ಉಲ್ಲೇ) 8*
*3. 2018(2) ಕೆಸಿಸಿಆರ್ 1457*
*ಟಿ.ಎನ್. ರವಿ ಪ್ರಕಾಶ್ –ವಿರುದ್ಧ–*
*ಕರ್ನಾಟಕ ರಾಜ್ಯ ಮತ್ತು ಇತರರು (ಉಲ್ಲೇ) 9*
*4. 2016(4) ಕೆಸಿಸಿಆರ್ 3700 (ಡಿಬಿ)*
*ಶ್ರೀ ಜಯಪ್ರಕಾಶ್.ಕೆ –ವಿರುದ್ಧ–*
*ಕರ್ನಾಟಕ ರಾಜ್ಯದ ಪ್ರತಿನಿಧಿಯಾದ ಕಾರ್ಯದರ್ಶಿ,*
*ಪಂಚಾಯತ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ*
*ಮತ್ತು ಇತರರು (ಉಲ್ಲೇ) 9*

ಅರ್ಜಿದಾರರ ಪರ : ಶ್ರೀ ಬಿಪಿನ್ ಹೆಗಡೆ, ವಕೀಲರು
1ನೇ ಪ್ರತ್ಯರ್ಜಿದಾರರ ಪರ : ಶ್ರೀ ವೈ.ಡಿ. ಹರ್ಷ, ಹೆಚ್ಚುವರಿ ಸರ್ಕಾರಿ ವಕೀಲರು.
2ನೇ ಪ್ರತ್ಯರ್ಜಿದಾರರ ಪರ : ಶ್ರೀ ವೆಂಕಟೇಶ್ ಎಸ್. ಅರಭಟ್ಟಿ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಮೊಹಮದ್ ನವಾಜ್:**

ಈ ರಿಟ್ ಅರ್ಜಿಯಲ್ಲಿ, ಅರ್ಜಿದಾರರು ಮೊದಲ ಪ್ರತ್ಯರ್ಜಿದಾರರು ದಿನಾಂಕ: 19.10.2017ರಂದು ಸಂಖ್ಯೆ: ಸಿಐ 05 ಎಂಜಿಎಸ್ 2017 ಬೆಂಗಳೂರು ಇದರಲ್ಲಿ ಈ ರಿಟ್ ಅರ್ಜಿಯಲ್ಲಿ ಲಗತ್ತಿಸಲಾಗಿರುವ ಅನುಬಂಧ–ಎ ಯಲ್ಲಿ ಹೊರಡಿಸಿದ ಆದೇಶವನ್ನು ಮತ್ತು 2ನೇ ಪ್ರತ್ಯರ್ಜಿದಾರರು ದಿನಾಂಕ: 31.12.2016ರಂದು ಸಂಖ್ಯೆ: ಸ.ಪ್ರಾ/ಉ.ಲೋ./ಬಿಜಿಎಂ–964/2016/ಎಆರ್‌ಇ–5ರಲ್ಲಿ ಈ ರಿಟ್ ಅರ್ಜಿಯಲ್ಲಿ ಹಾಜರುಪಡಿಸಿರುವ ಅನುಬಂಧ–ಬಿ ಯಲ್ಲಿ ಹೊರಡಿಸಿದ ಪ್ರಶ್ನಿತ ಆದೇಶವನ್ನು ವಜಾಗೊಳಿಸಿ, ಸರ್ಷಿಯೋರೆರಿ ರೂಪದ ರಿಟ್ ಅನ್ನು ಹೊರಡಿಸುವಂತೆ ಕೋರಿರುತ್ತಾರೆ.

2. ಅನುಬಂಧ–ಬಿ ಯಲ್ಲಿರುವ ಆದೇಶವನ್ನು 2ನೇ ಪ್ರತ್ಯರ್ಜಿದಾರರು ದಿನಾಂಕ:31.12.2016ರಂದು ಹೊರಡಿಸಿರುವ ಆದೇಶವನ್ನು ಶ್ರೀ ಸಂಗಮೇಶ್ ಬಸಪ್ಪ ಜಂಗಲಿ ಅವರ ದಾಖಲಿಸಿದ ದೂರಿಗೆ ಮತ್ತು ಬಾಗಲಕೋಟೆ, ಲೋಕಾಯುಕ್ತ ಪೊಲೀಸ್ ಅಧೀಕ್ಷಕರ ವರದಿ ಮತ್ತು ವರದಿಯನ್ನು ಸ್ವೀಕರಿಸಿದ ನಂತರ ವಸ್ತು ವಿಷಯದ ಸಂಗತಿಯು ಮೇಲ್ನೋಟದಲ್ಲಿ ವರದಿಯಲ್ಲಿ ಕಂಡು ಬಂದಿರುವುದರಿಂದ ಲೋಕಾಯುಕ್ತ ಪೊಲೀಸರು ಆದೇಶವನ್ನು ಹೊರಡಿಸಿರುವರು. ಇಲ್ಲಿ ಅರ್ಜಿದಾರರಾದ ಭೂಗರ್ಭ ಶಾಸ್ತ್ರಜ್ಞರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬಾಗಲಕೋಟೆ ಇವರು ಕರ್ನಾಟಕ ಸಿವಿಲ್ ಸೇವೆಗಳು (ನಡತೆ) ನಿಯಮಗಳು, 1966 [ಸಂಕ್ಷಿಪ್ತವಾಗಿ

"ನಿಯಮಗಳು 1966"] 3(1)ನೇ ನಿಯಮಗಳ ಅಡಿಯಲ್ಲಿ ಎಸಗಿದ ದುರ್ನಡತೆ ಕೃತ್ಯದಿಂದ ಮತ್ತು ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 [ಸಂಕ್ಷಿಪ್ತವಾಗಿ ಲೋಕಾಯುಕ್ತ ಅಧಿನಿಯಮ]ದ 12(3)ನೇ ಪ್ರಕರಣದ ಅಡಿಯಲ್ಲಿ ಸಕ್ಷಮ ಪ್ರಾಧಿಕಾರ ಮಾಡಿದ ಶಿಫಾರಸ್ಸಿನ ಮೇಲೆ, ಅರ್ಜಿದಾರರ ವಿರುದ್ಧ ಶಿಸ್ತು ಕ್ರಮವನ್ನು ಕೈಗೊಳ್ಳಲು ಮತ್ತು ಕರ್ನಾಟಕ ಸಿವಿಲ್ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957 [ಸಂಕ್ಷಿಪ್ತವಾಗಿ "1957 ನಿಯಮಗಳು"] 14–ಎ ನಿಯಮದ ಅಡಿಯಲ್ಲಿ ವಿಚಾರಣೆಯನ್ನು ನಡೆಸುವುದಕ್ಕೆ 2ನೇ ಪ್ರತ್ಯರ್ಜಿದಾರರು ಆದೇಶವನ್ನು ಹೊರಡಿಸಿರುವರು. ಮುಂದುವರೆದು, ಆದೇಶದಲ್ಲಿ ಲೋಕಾಯುಕ್ತ ಅಧಿನಿಯಮದ 12(4) ಪ್ರಕರಣದ ಅನುಸಾರವಾಗಿ, ವರದಿಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ಈ ವರದಿಯ ಆಧಾರದ ಮೇಲೆ ತೆಗೆದುಕೊಳ್ಳಬೇಕಾದ ಅಥವಾ ತೆಗೆದುಕೊಳ್ಳುವ ಕ್ರಮಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಸೂಚಿಸಲು ನಿರ್ದೇಶಿಸಿದೆ.

3. ಅನುಬಂಧ–ಎ ಯಲ್ಲಿರುವ ದಿನಾಂಕ: 19.10.2017ರಂದು 1ನೇ ಪ್ರತ್ಯರ್ಜಿದಾರರು ಹೊರಡಿಸಿದ ಆದೇಶದಲ್ಲಿ ಅರ್ಜಿದಾರರ ಮೇಲೆ ಬಂದಿರುವ ದೂರು ಮತ್ತು ವರದಿಯನ್ನು ಪರಿಗಣನೆಗೆ ತೆಗೆದುಕೊಂಡು ಹೊರಡಿಸಿದ ಆದೇಶವನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕರು ಮತ್ತಷ್ಟು ವರದಿಯನ್ನು ಉಪ ಲೋಕಾಯುಕ್ತ 1 ಅವರಿಗೆ 1957ರ ನಿಯಮಗಳ 14–ಎ ನಿಯಮದ ಪ್ರಕಾರ ಮತ್ತು ಲೋಕಾಯುಕ್ತ ಅಧಿನಿಯಮದ 12(4)ನೇ ಪ್ರಕರಣದ ಅಡಿಯಲ್ಲಿ ತನಿಖೆ ನಡೆಸುವುದಕ್ಕೆ ಮತ್ತು ತದಾನುಸಾರದ ಆದೇಶಗಳನ್ನು ಹೊರಡಿಸುವುದಕ್ಕೆ ಉಪ ಲೋಕಾಯುಕ್ತ 1 ಅವರಿಗೆ ಹಸ್ತಾಂತರಿಸಿರುವರು.

4. ನಾವು, ಅರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿಗಳಾದ ಶ್ರೀ ಬಿಪಿನ್ ಹೆಗಡೆಯವರ ವಾದವನ್ನು ಮತ್ತು ಪ್ರತ್ಯರ್ಜಿದಾರ ಸಂಖ್ಯೆ.1 ಅವರ

ಪರವಾಗಿ ಹಾಜರಾಗಿರುವ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರಾದ ವೈ.ಡಿ. ಹರ್ಷ ಅವರ ವಾದವನ್ನು ಹಾಗೂ 2ನೇ ಪ್ರತ್ಯರ್ಜಿದಾರರ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿಯಾದ ಶ್ರೀ ವೆಂಕಟೇಶ್ ಎಸ್. ಅರಭಟ್ಟಿ ಅವರುಗಳ ವಾದವನ್ನು ಆಲಿಸಿರುತ್ತೇವೆ.

5. ಅರ್ಜಿದಾರರು ಭೂಗರ್ಭ ವಿಜ್ಞಾನಿಯಾಗಿ ಕರ್ನಾಟಕ ಸರ್ಕಾರದ ಗಣಿ ಮತ್ತು ಭೂಗರ್ಭ ಇಲಾಖೆ ಬಾಗಲಕೋಟೆಯಲ್ಲಿ ದಿನಾಂಕ: 25.09.2014 ರಿಂದ ಕೆಲಸ ನಿರ್ವಹಿಸುತ್ತಿರುವರು ಹಾಗೂ ಈ ಮುಂಚೆ ಅವರು ಬಳ್ಳಾರಿಯಲ್ಲಿ ಭೂಗರ್ಭ ವಿಜ್ಞಾನಿಯಾಗಿ ಕೆಲಸ ನಿರ್ವಹಿಸುತ್ತಿದ್ದರು. ಬಾಗಲಕೋಟೆಯ ಹುನುಗುಂದ ತಾಲ್ಲೂಕಿನ ಇಳಕಲ್ಲಿನ ಸಂಗಮೇಶ ಬಸಪ್ಪ ಜಂಗ್ಲಿಯವರು ಅರ್ಜಿದಾರರ ವಿರುದ್ಧ ದಿನಾಂಕ: 31.04.2016ರಂದು ಕರ್ನಾಟಕ ಲೋಕಾಯುಕ್ತ ಸನ್ಮಾನ್ಯ ರಿಜಿಸ್ಟ್ರಾರ್ ಅವರಿಗೆ ದೂರನ್ನು ನೀಡಿರುತ್ತಾರೆ. ದೂರಿನ ಪ್ರತಿಯನ್ನು ಅನುಬಂಧ-ಆರ್ ನಲ್ಲಿ ಲಗತ್ತಿಸಲಾಗಿದೆ, ದೂರು ಪ್ರತಿಯ ಭಾಷಾಂತರವು ಈ ಕೆಳಗಿನಂತಿದೆ:

> "ಇವರಿಗೆ:
> ಸನ್ಮಾನ್ಯ ರಿಜಿಸ್ಟ್ರಾರ್
> ಕರ್ನಾಟಕ ಲೋಕಾಯುಕ್ತ,
> ಬಹುಮಹಡಿ ಕಟ್ಟಡ,
> ಡಾ|| ಅಂಬೇಡ್ಕರ್ ವೀದಿ,
> ಬೆಂಗಳೂರು-560 001.
>
> ಈ ಕೆಳಗೆ ಸಹಿ ಮಾಡಿರುವ ಸಂಗಮೇಶ್ ಬಿ. ಜಂಗ್ಲಿಯಾದ ನಾನು ವಾರ್ಡ್ ನಂ.1, ಅಂಬೇಡ್ಕರ್ ಕಾಲೋನಿ, ಇಳಕಲ್-587125, ಹುನುಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆಯಲ್ಲಿ ವಾಸವಾಗಿರುತ್ತೇನೆ. ವ್ಯಾಪಾರ ವೃತ್ತಿಯನ್ನು ಮಾಡುತ್ತಿದ್ದೇನೆ. ನನ್ನ ದೂರು ಈ ಕೆಳಗಿನಂತಿದೆ.

ವಿಷಯ: ಅಕ್ರಮ ಕಲ್ಲು ಗಣಿಗಾರಿಕೆಯನ್ನು ನಿರ್ಬಂಧಿಸುವ ಕುರಿತು.

ಮಾನ್ಯರೇ,

ಹುನಗುಂದ ತಾಲ್ಲೂಕಿನ ಎಸ್.ಬಿ. ಗೂಡೂರ್ ಗ್ರಾಮದ ಸರ್ವೆ ನಂ.1ರಲ್ಲಿ 1 ಎಕರೆ 20 ಗುಂಟೆಗಳ ಜಮೀನಿನ ಮಾಲೀಕರಾದ ಎಸ್.ವೈ. ಬಾಂದಿಯವರು ತಮ್ಮ ಜಮೀನಿನಲ್ಲಿ ಸರ್ಕಾರಿ ನಿಯಮಗಳನ್ನು ಉಲ್ಲಂಘಿಸಿ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿರುತ್ತಾರೆ ಎಂದು ಫಯಾಜ್ ಅಹಮದ್ ಷೇಕ್ ಭೂಗರ್ಭ ವಿಜ್ಞಾನಿಯವರು ಸಿದ್ಧಪಡಿಸಿದ ವರದಿಯಲ್ಲಿನ ಮಾಹಿತಿಯನ್ನು ಒದಗಿಸಿರುತ್ತಾರೆ. ಮೇಲೆ ಹೇಳಲಾದ ಸದರಿ ಎಸ್.ವೈ. ಬಾಂದಿ ಅವರು ನಿಯಮಗಳನ್ನು ಅನುಸರಿಸದೇ ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸುತ್ತಿರುವರು. ಸರ್ಕಾರವು ಗಣಿಗಾರಿಕೆ ಮಾಡಲು 1–20 ಎಕರೆ ಮಾತ್ರವೇ ಅನುಮತಿಯನ್ನು ನೀಡಿದೆ. ಆದರೆ, ಬಾಂಡಿಯವರು ಅಕ್ರಮವಾಗಿ 8 ರಿಂದ 10 ಎಕರೆಯ ಜಮೀನಿನಲ್ಲಿ ಅಕ್ರಮ ಗಣಿಗಾರಿಕೆಯನ್ನು ನಡೆಸುತ್ತಿರುವರು. ಕರ್ನಾಟಕ ಗಣಿಗಳ ಮತ್ತು ಖನಿಜಗಳ ನಿಯಮಗಳು 1954ರ 6(2)ನೇ ನಿಯಮದ ಪ್ರಕಾರದಂತೆ ಗಣಿಗಾರಿಕೆ ಪ್ರದೇಶವು ಸಾರ್ವಜನಿಕ ಕಟ್ಟಡಗಳಿಂದ ಬಹು ದೂರ ಪ್ರದೇಶದಲ್ಲಿ ನಡೆಸಬೇಕು. ಆದರೆ ಪ್ರಸ್ತುತ ಗಣಿಗಾರಿಕೆ ಪ್ರದೇಶವು ಸಾರ್ವಜನಿಕ ಕಟ್ಟಡಗಳಿಗೆ ಬಹಳ ಹತ್ತಿರದ ಪ್ರದೇಶದಲ್ಲಿದೆ. ಅದರಲ್ಲೂ ಶಾಲಾ ಕಟ್ಟಡಕ್ಕೆ ಬಹು ಹತ್ತಿರದಲ್ಲಿದ್ದು ಇದರಿಂದ ಶಾಲಾ ಮಕ್ಕಳು ಸಾಕಷ್ಟು ತೊಂದರೆಯನ್ನು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಗಣಿ ಪ್ರದೇಶದಲ್ಲಿ ಬಂಡೆಗಳನ್ನು ಸ್ಫೋಟಿಸುವ ಕಾರಣದಿಂದ ಸುತ್ತಮುತ್ತಲಿನ ಪ್ರದೇಶದಲ್ಲಿರುವ ಶಾಲಾ ಕಟ್ಟಡ ಮತ್ತು ಮನೆ ಕಟ್ಟಡಗಳಲ್ಲಿ ಬಿರುಕುಗಳು ಕಾಣಿಸಿಕೊಂಡಿದೆ. ಸದರಿ ಸಂಗತಿಯನ್ನು ತಮ್ಮ ಗಮನಕ್ಕೆ ತರುವ ಉದ್ದೇಶದಿಂದ

ಅಕ್ರಮ ಗಣಿಗಾರಿಕೆ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೆ ಗಣಿಗಾರಿಕೆಯ ಒಪ್ಪಂದವನ್ನು ದೂರಿನೊಂದಿಗೆ ಲಗತ್ತಿಸಲಾಗಿದೆ ಮತ್ತು ಗಣಿಗಾರಿಕೆಯಿಂದ ಶಾಲಾ ಮಕ್ಕಳು ಮತ್ತು ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ದೂರುದಾರರ ಸಹಿ:–
ಸಹಿ/–
(ಸಂಗಮೇಶ ಬಿ. ಜಂಗ್ಲಿ)"

ಇಳಕಲ್.
ದಿನಾಂಕ:31.4.2016.

6. ಸಹಾಯಕ ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಪೊಲೀಸು ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬಾಗಲಕೋಟೆ ಇವರಿಗೆ ತನಿಖೆ ನಡೆಸುವುದಕ್ಕೆ ಮತ್ತು ವರದಿಯನ್ನು ಸಲ್ಲಿಸುವುದಕ್ಕೆ ನಿರ್ದೇಶಿಸಿದ್ದಾರೆ. ತದನುಸಾರವಾಗಿ ತನಿಖೆಯನ್ನು ನಡೆಸಲಾಗಿದೆ. ತನಿಖೆಯ ಸಂದರ್ಭದಲ್ಲಿ, ಅರ್ಜಿದಾರರ ಹೇಳಿಕೆಯನ್ನು ಹಾಗೆಯೇ ಗಣಿಗಾರಿಕೆ ಪ್ರದೇಶದ ಸುತ್ತಲಿನ ನಿವಾಸಿಗಳ ಮತ್ತು ಶಾಲಾ ಶಿಕ್ಷಕರುಗಳ ಹೇಳಿಕೆಯನ್ನು ಪಡೆದುಕೊಳ್ಳಲಾಗಿದೆ. ತನಿಖೆಯನ್ನು ನಡೆಸಿದ ತದನಂತರದಲ್ಲಿ, ಉಪಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬಾಗಲಕೋಟೆ ಇವರು ದಿನಾಂಕ: 4.10.2016ರಂದು ಸಹಾಯಕ ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ವರದಿಯನ್ನು ಸಲ್ಲಿಸಿರುವರು. ಸದರಿ ವರದಿಯಲ್ಲಿ, ಒತ್ತುವರಿಯ ಆರೋಪಗಳು, ಸಂರಕ್ಷಿತ ಅಂತರವನ್ನು ನಿರ್ವಹಿಸದಿರುವುದು ಮತ್ತು ಗಣಿಗಾರಿಕೆ ಕಾರಣದಿಂದ ಹಾನಿಗೊಳಗಾದ ಮನೆಗಳ ವಿಷಯವು ಸುಸ್ಥಾಪಿತವಾಗಿದೆ. ಆದರೆ, ಇನ್ನುಳಿದ ಆರೋಪಗಳಾದ ಸ್ಫೋಟದ ಸಾಮಾಗ್ರಿಗಳ ಬಳಕೆಯಿಂದ ಮಕ್ಕಳು ಅನುಭವಿಸುತ್ತಿರುವ ಆತಂಕ ಮತ್ತು ಅಕ್ರಮ ಗಣಿಗಾರಿಕೆಯಿಂದ ಶಾಲಾ ಮಕ್ಕಳು

ಅನುಭವಿಸುತ್ತಿರುವ ತೊಂದರೆಗಳು ರುಜುವಾತು ಆಗಿರುವುದಿಲ್ಲ. ಅರ್ಜಿದಾರರಿಗೆ ದಿನಾಂಕ: 01.12.2016ರಂದು ನೋಟೀಸ್‌ನ್ನು ಜಾರಿ ಮಾಡಲಾಗಿದೆ, ಜಾರಿ ಮಾಡಿದ ನೋಟೀಸಿಗೆ ಅರ್ಜಿದಾರರು ತಮ್ಮ ಆಕ್ಷೇಪಣೆಗಳನ್ನು ದಾಖಲಿಸಿರುವರು. ಆದಾಗ್ಯೂ, ಅರ್ಜಿದಾರರು ತಾವು ದಾಖಲಿಸಿದ ಆಕ್ಷೇಪಣೆಗಳನ್ನು ಯುಕ್ತವಾಗಿ ಪರಿಗಣಿಸಿರುವುದಿಲ್ಲ. 2ನೇ ಪ್ರತ್ಯರ್ಜಿದಾರರು 1966ನೇ ನಿಯಮಗಳ 3(1)ನೇ ನಿಯಮದ ಅಡಿಯಲ್ಲಿ ಅರ್ಜಿದಾರರ ದುರ್ನಡತೆಗಾಗಿ ಮತ್ತು 1957 ನಿಯಮಗಳ 14(ಎ) ನಿಯಮದ ಅಡಿಯಲ್ಲಿ ತನಿಖೆಯನ್ನು ನಡೆಸುವುದಕ್ಕೆ ಮತ್ತು ಶಿಸ್ತು ಕ್ರಮವನ್ನು ಉಪಕ್ರಮಿಸುವುದಕ್ಕೆ ಸಕ್ಷಮ ಪ್ರಾಧಿಕಾರಕ್ಕೆ ಲೋಕಾಯುಕ್ತ ಅಧಿನಿಯಮದ 12(3)ನೇ ಪ್ರಕರಣದ ಅಡಿಯಲ್ಲಿ ಶಿಫಾರಸ್ಸು ಮಾಡಿದೆ ಮತ್ತು ಶಿಸ್ತು ಕ್ರಮವನ್ನು ವ್ಯವಸ್ಥಿತವಾಗಿ ಮುಂದುವರೆಸಲು ತಿಳಿಸಿದೆ. ದಿನಾಂಕ: 31.12.2016ರಂದು ಸದರಿ ವರದಿಯನ್ನು ಸ್ವೀಕರಿಸಲಾಗಿದೆ. 1ನೇ ಪ್ರತ್ಯರ್ಜಿದಾರರು ನಿರ್ದೇಶಕರು, ಗಣಿ ಮತ್ತು ಭೂಗರ್ಭ ವಿಜ್ಞಾನ, ಬೆಂಗಳೂರು ಇವರಿಂದ ವರದಿಯನ್ನು ಕೋರಿರುವರು, ಅದರಂತೆ ದಿನಾಂಕ: 14.06.2017ರಂದು ನಿರ್ದೇಶಕರು ವರದಿಯನ್ನು ಸಲ್ಲಿಸಿರುವರು. ಸಲ್ಲಿಸಿರುವ ವರದಿಯಲ್ಲಿ ಗಣಿಗಾರಿಕೆ ಚಟುವಟಿಕೆಯಲ್ಲಿ ಸ್ಫೋಟಕಗಳನ್ನು ಬಳಸಿರುವುದನ್ನು ರುಜುವಾತುಪಡಿಸಿರುವುದಿಲ್ಲ. ಅಲ್ಲದೆ ಅರ್ಜಿದಾರರು ಗಣಿಗಾರಿಕೆಯಿಂದ ಗುಲಾಬಿ ಬಣ್ಣದ ಗ್ರಾನೈಟ್ ಕಲ್ಲುಗಳನ್ನು ಅಕ್ರಮವಾಗಿ ತೆಗೆದು ಶೇಖರಿಸಿರುತ್ತಾರೆ. ಅಕ್ರಮ ಗಣಿಗಾರಿಕೆ ಚಟುವಟಿಕೆಗೆ ಅರ್ಜಿದಾರರ ವಿರುದ್ಧ ಯಾವುದೇ ಕ್ರಮಗಳನ್ನು ಕೈಗೊಂಡಿರುವುದಿಲ್ಲ ಎಂಬ ಅಂಶವು ವರದಿಯಲ್ಲಿ ತೋರಿಸಲಾಗಿರುತ್ತದೆ. ಆದಾಗ್ಯೂ, ಅರ್ಜಿದಾರರ ಅನುಸಾರವಾಗಿ, ಸದರಿ ವರದಿಯು ಒತ್ತುವರಿಯ ವಾಸ್ತವ ಸಂಗತಿಯನ್ನು ಸರಿಯಾಗಿ ಪರಿಶೀಲಿಸಿರುವುದಿಲ್ಲವೆಂದು ಮತ್ತು ಅರ್ಜಿದಾರರು ಹೆಚ್ಚುವರಿಯಾಗಿ ಸಂಗ್ರಹಿಸಿದ ಗುಲಾಬಿ ಬಣ್ಣದ ಗ್ರಾನೈಟ್ ಅನ್ನು ಪರವಾನಿಗಿ ಅವಧಿಯಲ್ಲಿ ಹೊರತೆಗೆದುದಲ್ಲವೆಂದು ಅದರ ಹೊಣೆಗಾರಿಕೆಯನ್ನು ಅರ್ಜಿದಾರರು ಹೊರಲು ಸಿದ್ಧವಿಲ್ಲವೆಂದು ಆಕ್ಷೇಪಣೆಯಲ್ಲಿ ತಿಳಿಸಿರುವರು ಮತ್ತು ಇದರಿಂದ 1ನೇ ಪ್ರತ್ಯರ್ಜಿದಾರರು ದಿನಾಂಕ: 19.10.2017ರ ವರದಿಯ ಪ್ರಕಾರದಂತೆ ಅರ್ಜಿದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಿದೆ, ಹೀಗೆ ಅರ್ಜಿದಾರರ

ವಿರುದ್ಧ ನಿರ್ದೇಶಕರು, ಗಣಿ ಮತ್ತು ಭೂಗರ್ಭ ವಿಜ್ಞಾನ ಸಲ್ಲಿಸಿದ ವರದಿಯು ಅಕ್ರಮ ಮತ್ತು ವಜಾಗೊಳ್ಳಲು ಅರ್ಹವಾದುದೆಂದು ಸಲ್ಲಿಸಿದ ಅಪೀಲು ಅರ್ಜಿ ಇದಾಗಿದೆ.

7. ಅರ್ಜಿದಾರರ ಬಲವಾದ ಮುಖ್ಯ ವಾದಾಂಶವೇನೆಂದರೆ, ದೂರುದಾರರಾದ ಸಂಗಮೇಶ ಬಸಪ್ಪ ಜಂಗ್ಲಿಯವರು ಅರ್ಜಿದಾರರ ವಿರುದ್ಧ ಯಾವುದೇ ದುರ್ವ್ಯವಹಾರ ಬಗೆಯಾಗಲೀ ಅಥವಾ ಅಕ್ರಮ ಕೃತ್ಯದಲ್ಲಿ ಅರ್ಜಿದಾರರ ಒಳಗೊಂಡಿರುವ ಬಗೆಯಾಗಲೀ ಯಾವುದೇ ಆರೋಪಗಳು ಮಾಡಿರುವುದಿಲ್ಲ ಮತ್ತು ದೂರುದಾರನು ತನ್ನ ದೂರಿನಲ್ಲಿ ತಿಳಿಸಿರುವ ವಿವಾದಾಂಶಗಳನ್ನು ಸಮರ್ಥಿಸುವಂತಹ ಯಾವುದೇ ಯುಕ್ತವಾದ ಸಾಕ್ಷ್ಯಗಳನ್ನು ಒದಗಿಸಿರುವುದಿಲ್ಲ ಎಂಬುದು ಅರ್ಜಿದಾರರ ವಾದಾಂಶವಾಗಿದೆ. ಮುಂದುವರೆದು, 1ನೇ ಪ್ರತ್ಯರ್ಜಿದಾರರು ಲೋಕಾಯುಕ್ತ ಅಧಿನಿಯಮದ 12(4)ನೇ ಪ್ರಕರಣದ ಅನುಸಾರವಾಗಿ ಕರ್ತವ್ಯವನ್ನು ನಿರ್ವಹಿಸಿರುವುದಿಲ್ಲ ಎಂಬುದು ಅರ್ಜಿದಾರರ ಪ್ರಮುಖ ವಾದಾಂಶವಾಗಿದೆ. ಅರ್ಜಿದಾರರು, ಲೋಕಾಯುಕ್ತ ಅಧಿನಿಯಮದ 8ನೇ ಪ್ರಕರಣದ ಅಂಶಗಳನ್ನು ಆಧಾರವಾಗಿಟ್ಟುಕೊಂಡು ದೂರುದಾರರ ಅರ್ಜಿಯನ್ನು ಸ್ವೀಕರಿಸಲು 2ನೇ ಪ್ರತ್ಯರ್ಜಿದಾರರಿಗೆ ಅಧಿಕಾರ ವ್ಯಾಪ್ತಿ ಇರುವುದಿಲ್ಲ. ಅದರಂತೆ ದೂರುದಾರರು ತಮ್ಮ ದೂರಿಗೆ ಕರ್ನಾಟಕ ಸಣ್ಣ ಖನಿಜಗಳು ರಿಯಾಯಿತಿ ನಿಯಮಗಳು, 1994 (ಸಂಕ್ಷಿಪ್ತವಾಗಿ ಕೆಎಂಎಂಸಿ ನಿಯಮಗಳು) ಅಡಿಯಲ್ಲಿ ಪರಿಹಾರೋಪಾಯವನ್ನು ಕಂಡುಕೊಳ್ಳಬೇಕೆಂದು ವಾದವನ್ನು ಮಂಡಿಸಿರುವರು. ಅರ್ಜಿದಾರರ ಪ್ರಕಾರ, ಲೋಕಾಯುಕ್ತ ಅಧಿನಿಯಮದ 8ನೇ ಪ್ರಕರಣದ ಅಡಿಯಲ್ಲಿ, ಪ್ರಸ್ತುತ ಮೊಕದ್ದಮೆಯಲ್ಲಿ ಅದರ ಉದ್ದೇಶಿತ ಯಾವುದೇ ಕ್ರಮವು ದೂರು ಒಳಗೊಂಡ ಪರಿಹಾರೋಪಾಯದ ಮೊಕದ್ದಮೆಯ ಸಂಬಂಧದಲ್ಲಿ ಆ ಯಾವುದೇ ತನಿಖೆಯನ್ನು ಲೋಕಾಯುಕ್ತರು ಅಥವಾ ಉಪಲೋಕಾಯುಕ್ತರು ನಡೆಸತಕ್ಕದ್ದಲ್ಲ. ದೂರುದಾರನು ಕೆಎಂಎಂಸಿ ನಿಯಮಗಳ 6(3)ನೇ ನಿಯಮದ ಮತ್ತು ಲೋಕಾಯುಕ್ತ ಅಧಿನಿಯಮದ 8(1)(ಬಿ)ಯ ಪ್ರಕರಣದ ಅಡಿಯಲ್ಲಿ ಪರಿಹಾರೋಪಾಯವನ್ನು ಕಂಡುಕೊಳ್ಳಬೇಕಿದ್ದ ಪಕ್ಷದಲ್ಲಿ ಯಾವುದೇ ನ್ಯಾಯಾಧೀಕರಣದ ಮುಂದೆ ಅಪೀಲು ಪರಿಷ್ಕರಣೆ, ಪರಿಶೀಲನೆ ಅಥವಾ ಇತರೆ ಯಾವುದೇ ವ್ಯವಹರಣೆಗಳ ಮಾರ್ಗದಲ್ಲಿ

ಯಾವುದೇ ಪರಿಹಾರೋಪಾಯ ಕಂಡುಕೊಳ್ಳಬೇಕಾಗುತ್ತದೆ ಮತ್ತು ಅಂಥ ಸದರಿ ಪರಿಹಾರೋಪಾಯಗಳು ಲಭ್ಯವಾಗುವವರೆಗೂ ಮತ್ತು ಲಭ್ಯವಾಗದ ಹೊರತು ಅಂಥ ದೂರನ್ನು ಪುರಸ್ಕರಿಸತಕ್ಕದ್ದಲ್ಲ.

8. ಮೇಲಿನ ವಾದಾಂಶಗಳಿಗೆ ಪೂರಕವಾಗಿ, ಅರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ವರದಿಯಾಗಿರುವ ***ಮೆ// ಕುಮಾರಸ್ವಾಮಿ ಖನಿಜಗಳ ರಫ್ತು ಪ್ರೈವೇಟ್ ಲಿಮಿಟೆಡ್ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು***[1] ಮೊಕದ್ದಮೆಯ ನಿರ್ಣಯವನ್ನು ಮತ್ತು ಈ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ವರದಿಯಾಗದಿರುವ ***ಮಿಲಿಂದ ವಿದ್ಯಾ ಸಂಸ್ಥೆ (ನೋ) –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು***[2] ಮೊಕದ್ದಮೆಯಲ್ಲಿನ ನಿರ್ಣಯವನ್ನು ಪ್ರಸ್ತುತ ಮೊಕದ್ದಮೆಗೆ ಅವಲಂಬನೆಯಾಗಿ ನೀಡಿರುವರು.

9. 2ನೇ ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ವರದಿಯಾಗಿರುವ ***ಟಿ.ಎನ್. ರವಿ ಪ್ರಕಾಶ್ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು***[3] ಮೊಕದ್ದಮೆಯಲ್ಲಿ ಈ ನ್ಯಾಯಾಲಯ ನೀಡಿದ ನಿರ್ಣಯವನ್ನು ಮತ್ತು ***ಶ್ರೀ ಜಯಪ್ರಕಾಶ್ .ಕೆ –ವಿರುದ್ಧ– ಕರ್ನಾಟಕ ರಾಜ್ಯದ ಪ್ರತಿನಿಧಿಯಾದ ಕಾರ್ಯದರ್ಶಿ, ಪಂಚಾಯತ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಮತ್ತು ಇತರರು***[4] ಮೊಕದ್ದಮೆಯಲ್ಲಿನ ನಿರ್ಣಯವನ್ನು ಅವಲಂಬನೆಯಾಗಿ ನೀಡಿರುವರು.

10. ಲೋಕಾಯುಕ್ತ ಅಧಿನಿಯಮದ 8ನೇ ಪ್ರಕರಣವು ಈ ಕೆಳಗಿನಂತೆ ಓದಿಕೊಳ್ಳಲಾಗಿದೆ:

1. ಐಎಲ್‌ಆರ್ 2015 ಕರ್ನಾಟಕ 5591
2. ರಿಟ್ ಅರ್ಜಿ ಸಂಖ್ಯೆ: 48876/2015 (ಜಿಎಂ–ಕೆಎಲ್‌ಐ) ದಿನಾಂಕ: 01.07.2016
3. 2018(2) ಕೆಸಿಸಿಆರ್ 1457
4. 2016(4) ಕೆಸಿಸಿಆರ್ 3700 (ಡಿಬಿ)

*8. ತನಿಖೆಗೆ ಒಳಪಡದ ವಿಷಯಗಳು.-*

*(1) ಇದರಲ್ಲಿ ಇನ್ನು ಮುಂದೆ ಉಪ ಬಂಧಿಸಿರುವ ಹೊರತಾಗಿ, ಯಾವುದೇ ಕ್ರಮವನ್ನು ಕುರಿತು ದೂರನ್ನು ಒಳಗೊಂಡ ಫಿರ್ಯಾದನ್ನು ನೀಡಿದಾಗ,-*

*(ಎ) ಅಂಥ ಕ್ರಮವು ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದ್ದರೆ; ಅಥವಾ*

*(ಬಿ) ಫಿರ್ಯಾದು ನೀಡಿದವರಿಗೆ ಯಾವುದೇ ನ್ಯಾಯಾಧೀಕರಣ, ನ್ಯಾಯಾಲಯ, ಅಧಿಕಾರಿ ಮತ್ತು ಇತರ ಪ್ರಾಧಿಕಾರದ ಮುಂದೆ ಅಪೀಲು, ಪುನರೀಕ್ಷಣ ಅಥವಾ ಪುನರ್ವಿಲೋಕನದ ಅಥವಾ ಇತರ ವ್ಯವಹರಣೆಗಳ ಮೂಲಕ ಯಾವುದೇ ಪರಿಹಾರ ಪಡೆಯಲು ಅವಕಾಶ ಇರುವುದಾದರೆ ಅಥವಾ ಇದ್ದರೆ ಮತ್ತು ಅದರ ಪ್ರಯೋಜನ ಪಡೆಯದಿದ್ದರೆ,*

*-ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಈ ಅಧಿನಿಯಮದ ಮೇರೆಗೆ ಯಾವುದೇ ತನಿಖೆಯನ್ನು ನಡೆಸತಕ್ಕದ್ದಲ್ಲ.*

ಅರ್ಜಿದಾರರ ಪ್ರಕಾರ, ದೂರುದಾರರು ಪರಿಹಾರೋಪಾಯವನ್ನು ಹೊಂದಿರುವರು ಮತ್ತು ಕೆಎಂಎಂಸಿ ನಿಯಮಗಳ 6(3) ನಿಯಮದ ಅಡಿಯಲ್ಲಿ ಅಂಥ ಪರಿಹಾರೋಪಾಯ ಒಳಗೊಂಡ ದೂರಿನ ಸಂಬಂಧದಲ್ಲಿ ಲೋಕಾಯುಕ್ತ ಅಧಿನಿಯಮದ 8ನೇ ಪ್ರಕರಣದ ಅಡಿಯಲ್ಲಿ 2ನೇ ಪ್ರತ್ಯರ್ಜಿದಾರರು ವ್ಯವಹರಣೆಗಳನ್ನು ನಡೆಸಬಾರದು. ಸಕ್ಷಮ ಪ್ರಾಧಿಕಾರ ಮಾತ್ರವೇ ಉದ್ದೇಶಿತ ಪ್ರಕ್ರಿಯೆಯನ್ನು ಮುಂದುವರೆಸುವ ಮೂಲಕ ಕ್ರಮ ಕೈಗೊಳ್ಳುವುದಕ್ಕೆ ಅಧಿಕಾರವನ್ನು ಹೊಂದಿರುತ್ತವೆ

ಮತ್ತು ಕ್ರಮಗಳು ತೆಗೆದುಕೊಳ್ಳುವುದಕ್ಕೆ ಅಧಿಕಾರ ಹೊಂದಿರುವ ಸಕ್ಷಮ ಪ್ರಾಧಿಕಾರವು ನಿರ್ದೇಶಕರು, ಗಣಿಗಳು ಮತ್ತು ಭೂಗರ್ಭ ವಿಜ್ಞಾನ ಇವರು ಆಗಿರುತ್ತಾರೆ.

11. ಕೆಎಂಎಂಸಿ ನಿಯಮಗಳ 6(3)ನೇ ನಿಯಮದ ಉದ್ಧೃತ ಭಾಗವು ಈ ಕೆಳಗಿನಂತಿದೆ:

> "6. ಕಲ್ಲು ಗಣಿಗಾರಿಕೆ ಗುತ್ತಿಗೆಯ ಮತ್ತು ಲೈಸೆನ್ಸ್‌ನ ಸಮನ್ಸ್ ಷರತ್ತುಗಳು.–
>
> (3) ಗುತ್ತಿಗೆದಾರ ಅಥವಾ ಲೈಸೆನ್ಸ್‌ಧಾರಕ ಅಥವಾ ಅವನ ವರ್ಗಾವಣೆಧಾರಕ ಅಥವಾ ಹಸ್ತಾಂತರಧಾರಕನು ಈ ನಿಯಮಗಳಲ್ಲಿ ಅಥವಾ ಕಲ್ಲು ಗಣಿಗಾರಿಕೆಯ ಗುತ್ತಿಗೆ ಒಪ್ಪಂದ ಪತ್ರ ಅಥವಾ ಲೈಸೆನ್ಸ್‌ನಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ ಪಕ್ಷದಲ್ಲಿ, ಸಕ್ಷಮ ಪ್ರಾಧಿಕಾರ ಗುತ್ತಿಗೆದಾರನಿಗೆ ಅಥವಾ ಲೈಸನ್ಸ್‌ಧಾರಕನಿಗೆ ನೋಟೀಸನ್ನು ನೀಡುವ ಮೂಲಕ ನೋಟೀಸಿನ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಉಲ್ಲಂಘನೆಯುನ್ನು ಪರಿಹರಿಸುವುದಕ್ಕೆ ಲಿಖಿತದಲ್ಲಿ ಅಗತ್ಯಪಡಿಸತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರವು ತಾನು ನೀಡಿದ ಅಂಥ ಅವಧಿಯೊಳಗಾಗಿ ಉಲ್ಲಂಘನೆಯ ಪರಿಹಾರೋಪಾಯವನ್ನು ಮಾಡದಿರುವುದು ಕಂಡು ಬಂದರೆ ಅದು ನಿರ್ದಿಷ್ಟ ಪಡಿಸದ ಸಣ್ಣ ಖನಿಜಗಳ ಸಂದರ್ಭದಲ್ಲಿ ಎರಡು ಸಾವಿರ ರೂಪಾಯಿಗಳು ಮೀರದಂತೆ ದಂಡವನ್ನು ಮತ್ತು ನಿರ್ದಿಷ್ಟಪಡಿಸಿದ ಸಣ್ಣ ಖನಿಜಗಳ ಸಂದರ್ಭದಲ್ಲಿ ಹತ್ತು ಸಾವಿರ ರೂಪಾಯಿಗಳ ದಂಡವನ್ನು ವಿಧಿಸತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರವು ಅಂಥ ಗುತ್ತಿಗೆದಾರ, ಲೈಸೆನ್ಸ್‌ಧಾರಕ,

> ವರ್ಗಾವಣೆಧಾರಕ ಅಥವಾ ಹಸ್ತಾಂತರಧಾರಕನ ವಿರುದ್ಧ ಯಾವುದೇ ಇತರ ಕ್ರಮಗಳನ್ನು ಯಾವುದೇ ಪೂರ್ವಾಗ್ರಹವಿಲ್ಲದೆ ಗುತ್ತಿಗೆದಾರನಿಗೆ ಅಥವಾ ಲೈಸೆನ್ಸ್‌ಧಾರಕನಿಗೆ ಅವನ ಅಹವಾಲನ್ನು ಹೇಳಿಕೊಳ್ಳುವುದಕ್ಕೆ ಒಂದು ಅವಕಾಶವನ್ನು ಒದಗಿಸಿದ ತರುವಾಯ ಅಂಥ ಕ್ರಮಗಳನ್ನು ನಿರ್ಣಯಿಸತಕ್ಕದ್ದು."

'ಕುಂದುಕೊರತೆ' ಪದದ ಪ್ರವರ್ಗವು ಲೋಕಾಯುಕ್ತ ಅಧಿನಿಯಮದ 2(8)ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಿದ 'ಕುಂದುಕೊರತೆ'ಯ ಪರಿಭಾಷೆಯ ಅಡಿಯಲ್ಲಿ ಪರಿಗಣಿಸುವುದಕ್ಕೆ ಸುಸಂಗತವಾಗಿದೆ. ಸದರಿ ಉಪಬಂಧದ ಅಡಿಯಲ್ಲಿ, 'ಕುಂದುಕೊರತೆ'ಯನ್ನು ಹೀಗೆ ಪರಿಭಾಷಿಸಲಾಗಿದೆ. ಅನ್ಯಾಯ ಅಥವಾ ದುರಾಡಳಿತದ ಪರಿಣಾಮವಾಗಿ ಅನಗತ್ಯ ತೊಂದರೆಯನ್ನು ಅನುಭವಿಸಿದ ವ್ಯಕ್ತಿಯು ಮಾಡುವ ಕ್ಲೇಮು."

12. ಅನುಬಂಧ–'ಆರ್'ನಲ್ಲಿ ಲಗತ್ತಿಸಿದ ದೂರನ್ನು ಗಮನಿಸಿದಾಗ, ದೂರುದಾರನು ಮಾಡಿರುವ ಕೆಲವೊಂದು ನಿರ್ದಿಷ್ಟ ಆರೋಪಗಳೆಂದರೆ, ನಿಯಮಗಳನ್ನು ಅನುಸರಿಸದೆ ಕಾನೂನು ಬಾಹಿರವಾಗಿ ಸೈಜ್ ಗಲ್ಲುಗಳನ್ನು ಸಂಗ್ರಹಿಸಿದ್ದಾನೆ ಮತ್ತು ಒತ್ತುವರಿ ಭೂಮಿಯಲ್ಲಿ ಅಂದರೆ ಗಣಿಗಾರಿಕೆ ಮಾಡಲು ಅನುಮತಿ ನೀಡದ ಪ್ರದೇಶದಲ್ಲಿ ಕಾನೂನು ಬಾಹಿರವಾಗಿ ಕಲ್ಲು ಗಣಿಗಾರಿಕೆಯನ್ನು ನಡೆಸುತ್ತಿದ್ದಾನೆ ಎಂಬುದಾಗಿದೆ. ವಿಚಾರಣೆಯ ಅವಧಿಯಲ್ಲಿ, ಇದರಲ್ಲಿ ಅರ್ಜಿದಾರನಾಗಿರುವ ಅಂದರೆ ಭೂಗರ್ಭ ಶಾಸ್ತ್ರಜ್ಞ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬಾಗಲಕೋಟೆ ಇವನು ಗಣಿಗಾರಿಕೆ ಪ್ರದೇಶವನ್ನು ಪರಿಶೀಲಿಸುವ ಕರ್ತವ್ಯವನ್ನು ನಿರ್ವಹಿಸುವಲ್ಲಿ ವಿಫಲನಾಗಿರುವುದು ಕಂಡು ಬರುತ್ತದೆ ಮತ್ತು ಅವನು ಅಂಥ ಕಾನೂನು ಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸುವುದಕ್ಕೆ ವಿಫಲವಾಗಿರುವುದು ಕಂಡು ಬರುತ್ತದೆ. ಹಾಗೆಯೇ ಸಂಬಂಧಪಟ್ಟ ಭೂಗರ್ಭ ಶಾಸ್ತ್ರಜ್ಞನು ಅಂಥ ಒತ್ತುವರಿ,

ಮುಂತಾದವುಗಳಿಗೆ ಸಂಬಂಧಿಸಿದಂತೆ ಕ್ರಮಗಳನ್ನು ತೆಗೆದುಕೊಳ್ಳುವುದು ಅವನ ಕರ್ತವ್ಯವಾಗಿರುತ್ತದೆ.

13. ಲೋಕಾಯುಕ್ತ ಅಧಿನಿಯಮದ 2(2) ಪ್ರಕರಣದಲ್ಲಿ ಪರಿಭಾಷಿಸಿದ 'ಆರೋಪಗಳು' 'ಅಪಾದನೆಗಳು' ಈ ಕೆಳಗಿನಂತಿದೆ:

> *"2. 'ಪರಿಭಾಷೆಗಳು.- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸುವ ಹೊರತು,-*
>
> *(2) ಸಾರ್ವಜನಿಕ ನೌಕರನ ಸಂಬಂಧದಲ್ಲಿ "ಆಪಾದನೆ" ಎಂದರೆ, ಅಂಥ ಸಾರ್ವಜನಿಕ ನೌಕರನು,-*
>
> *(ಎ) ತನಗೆ ಅಥವಾ ಇತರ ಯಾವೊಬ್ಬ ವ್ಯಕ್ತಿಗೆ ಯಾವುದೇ ಲಾಭ ಅಥವಾ ಅನುಕೂಲ ದೊರಕಿಸಿಕೊಳ್ಳಲು ಅಥವಾ ಇತರ ಯಾವೊಬ್ಬ ವ್ಯಕ್ತಿಗೆ ಅನುಚಿತ ಹಾನಿ ಅಥವಾ ತೊಂದರೆಯನ್ನುಂಟು ಮಾಡಲು ಅಂಥ ಸಾರ್ವಜನಿಕ ನೌಕರನಾಗಿ ತನ್ನ ಸ್ಥಾನವನ್ನು ದುರುಪಯೋಗ ಪಡಿಸಿಕೊಂಡಿದ್ದಾನೆ;*
>
> *(ಬಿ) ಅಂಥ ಸಾರ್ವಜನಿಕ ನೌಕರನಾಗಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ವೈಯುಕ್ತಿಕ ಹಿತಾಸಕ್ತಿಯಿಂದ ಅಥವಾ ಅನುಚಿತ ಅಥವಾ ಭ್ರಷ್ಟ ಪ್ರೇರಣೆಗಳಿಂದ ಪ್ರಚೋದಿತನಾಗಿದ್ದಾನೆ;*
>
> *(ಸಿ) ಅಂಥ ಸಾರ್ವಜನಿಕ ನೌಕರನಾಗಿ ತನ್ನ ಸ್ಥಾನದಲ್ಲಿ ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ ಅಥವಾ ನೀತಿ ನಿಷ್ಠೆಯ ಕೊರತೆಯಿಂದ ದೋಷಿಯಾಗಿದ್ದಾನೆ; ಅಥವಾ*

*(ಡಿ) ಅವನು ಯಾವ ವರ್ಗಕ್ಕೆ ಸೇರುವನೋ ಆ ವರ್ಗದ ಸಾರ್ವಜನಿಕ ನೌಕರರು ಅನುಸರಿಸಲೇಬೇಕಾದ ನೀತಿನಿಷ್ಠೆಯ ಮತ್ತು ನಡತೆಗಳ ಸೂತ್ರ ಪ್ರಮಾಣಗಳಿಗನುಸಾರವಾಗಿ ಕಾರ್ಯನಿರ್ವಹಿಸಲು ತಪ್ಪಿದ್ದಾನೆ;*

*– ಎಂಬ ಯಾವುದೇ ಸ್ಥಿರೀಕರಣ."*

14. ಮೇಲೆ ಹೇಳಲಾದ ಅಂಶಗಳ ಹಿನ್ನೆಲೆಯಲ್ಲಿ, ದೂರಿನಲ್ಲಿ ಮಾಡಲಾದ ದೃಢೋಕ್ತಿ ಸ್ವರೂಪದ ಸಂಗತಿಗಳು ಪರಿಭಾಷಿಸಲಾದ "ಕುಂದುಕೊರತೆ" ವ್ಯಾಪ್ತಿಯೊಳಗೆ ಬರುವುದಿಲ್ಲ. ಆದರೆ ಲೋಕಾಯುಕ್ತ ಅಧಿನಿಯಮದ 2(2)ನೇ ಪ್ರಕರಣದ ಅಡಿಯಲ್ಲಿ ಪರಿಭಾಷಿಸಲಾದ ಆಪಾದನೆಗಳು ಸ್ವರೂಪದ ವ್ಯಾಪ್ತಿಯೊಳಗೆ ಈ ಸಂಗತಿಗಳು ಬರುತ್ತವೆ. ಅದು ಹಾಗಿರುವಾಗ, ಲೋಕಾಯುಕ್ತ ಅಧಿನಿಯಮದ 8ನೇ ಪ್ರಕರಣದ ಅಂಶಗಳಲ್ಲಿ 2ನೇ ಪ್ರತ್ಯರ್ಜಿದಾರನು ತನಿಖೆ ನಡೆಯುವುದಕ್ಕೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲವೆಂದು ಹೇಳಲು ಅದು ಸಹಾಯಕ್ಕೆ ಬರುವುದಿಲ್ಲ. ಅರ್ಜಿದಾರನಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಸಕ್ಷಮ ಪ್ರಾಧಿಕಾರ ಮಾತ್ರವೇ ಸಂಬಂಧಪಟ್ಟ ಅರ್ಜಿದಾರನು ಕೆಎಂಎಂಸಿ ನಿಯಮಗಳ 6(3)ನೇ ನಿಯಮದ ಅಡಿಯಲ್ಲಿ ಉದ್ದೇಶಿತ ಪ್ರಕ್ರಿಯೆಯನ್ನು ಅನುಸರಿಸಿ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರ ಹೊಂದಿದೆ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

15. ಅರ್ಜಿದಾರನು, ***ಮೆ|| ಕುಮಾರಸ್ವಾಮಿ ಖನಿಜ ರಫ್ತುಗಳ ಪ್ರೈವೇಟ್ ಲಿಮಿಟೆಡ್ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು*** ಮೊಕದ್ದಮೆಯಲ್ಲಿನ ನಿರ್ಣಯವನ್ನು ಅವಲಂಬನೆಯಾಗಿ ನೀಡಿರುವನು, ದೂರುದಾರರ ಕುಂದುಕೊರತೆಯನ್ನು ನಿವಾರಿಸುವುದಕ್ಕಾಗಿ ಸಕ್ಷಮ ಪ್ರಾಧಿಕಾರವು ಶಿಫಾರಸ್ಸುಗಳನ್ನು ಮಾಡಿರುವ ಸಂದರ್ಭದಲ್ಲಿ ಮೊಕದ್ದಮೆಯಲ್ಲಿ ಲೋಕಾಯುಕ್ತ ಅಧಿನಿಯಮದ 12(ಸಿ) ಪ್ರಕರಣದ ಅಡಿಯಲ್ಲಿ ವರದಿಯನ್ನು ಮಾಡಲಾಗಿರುತ್ತದೆ. ಸದರಿ ಮೊಕದ್ದಮೆಯಲ್ಲಿ ಫಿರ್ಯಾದುದಾರನು ನಿರ್ದಿಷ್ಟ ಪ್ರದೇಶದಲ್ಲಿ ಗಣಿಗಾರಿಕೆಯ ಗುತ್ತಿಗೆ ಮಂಜೂರಾತಿಗಾಗಿ ಅರ್ಜಿಯನ್ನು ಸಲ್ಲಿಸಿರುವರು. ಸದರಿ ನಿರ್ದಿಷ್ಟ ಪ್ರದೇಶದ

ಗಣಿಗಾರಿಕೆ ಗುತ್ತಿಗೆಯು ಈಗಾಗಲೇ ಅರ್ಜಿದಾರನ ಪರವಾಗಿ ಮಂಜೂರಾಗಿರುತ್ತದೆ. ಈ ಕಾರಣದಿಂದ ಮಂಜೂರಾತಿಗಾಗಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಲಾಗಿರುತ್ತದೆ. ಈ ಮೊಕದ್ದಮೆಯಲ್ಲಿ ಅನೇಕ ಹಂತದ ವ್ಯಾಜ್ಯಗಳು ನಡೆದಿರುತ್ತವೆ. ನಂತರದಲ್ಲಿ ಎಲ್ಲದಕ್ಕೂ ಪರಿಹಾರೋಪಾಯಗಳು ಲಭ್ಯವಾಗಿದ್ದು, ತದನಂತರದಲ್ಲಿ ದೂರುದಾರನು ಪ್ರದೇಶದಲ್ಲಿ ಕಾನೂನುಬಾಹಿರ ಗಣಿಗಾರಿಕೆ ನಡೆಸಲಾಗುತ್ತಿದೆ ಎಂದು ಲೋಕಾಯುಕ್ತಕ್ಕೆ ದೂರನ್ನು ನೀಡಿರುತ್ತಾನೆ. ಲೋಕಾಯುಕ್ತರು ಲೋಕಾಯುಕ್ತ ಅಧಿನಿಯಮ 12(3)ನೇ ನಿಯಮದ ಅಡಿಯಲ್ಲಿ ಒಂದು ಆದೇಶವನ್ನು ಹೊರಡಿಸಿರುತ್ತಾರೆ. ಆದೇಶದಲ್ಲಿ ನಿರ್ದೇಶಕರು, ಗಣಿಗಳು ಮತ್ತು ಭೂಗರ್ಭ ವಿಜ್ಞಾನ ಇಲಾಖೆ, ಕರ್ನಾಟಕ ಇವರು ನಿರುಪಾಧಿಕ ಕರ್ತವ್ಯ ನಿಷ್ಠೆಯನ್ನು ನಿರ್ವಹಿಸುವಲ್ಲಿ ವಿಫಲರಾಗಿರುವರು ಮತ್ತು 1966 ನಿಯಮಗಳ 3(i)(ii)ರ ನಿಯಮದ ಅಡಿಯಲ್ಲಿ ದುರ್ನಡತೆಯನ್ನು ಎಸಗಲಾಗಿದೆ ಎಂದು ಹೇಳಲಾಗಿದೆ. ಈ ನ್ಯಾಯಾಲಯ ಸದರಿ ಮೊಕದ್ದಮೆಯ ಸಂಗತಿಗಳನ್ನು ಮತ್ತು ಲೋಕಾಯುಕ್ತ ಅಧಿನಿಯಮದ 8(1)(ಬಿ) ಪ್ರಕರಣಕ್ಕೆ ಹೆಚ್ಚಿನ ಒತ್ತು ನೀಡಿದ ಅಂಶವನ್ನು ಪರಿಗಣಿಸಿ ನಿರ್ಣಯಿಸಬೇಕೆಂದು ಅದರಲ್ಲೂ ದೂರುದಾರನು ಕೆಎಂಎಂಸಿ ನಿಯಮಗಳ ಅಡಿಯಲ್ಲಿ ತನ್ನ ಪರಿಹಾರೋಪಾಯವನ್ನು ಸಂಪೂರ್ಣವಾಗಿ ಪಡೆದುಕೊಂಡ ನಂತರವೂ ಸಹ, ದೂರುದಾರನು ಈ ನ್ಯಾಯಾಲಯದ ಮುಂದೆ ಪ್ರಾಧಿಕಾರಗಳಿಗೆ ನಕಲಿ ರೂಪದ ದೂರನ್ನು ಹೂಡುವುದಕ್ಕೆ ಅವಕಾಶ ಮಾಡಿಕೊಡಬಾರದು ಮತ್ತು ಅಲ್ಲದೆ, ಲೋಕಾಯುಕ್ತವು ಅರ್ಜಿದಾರನ ಪರವಾಗಿರುವ ಗುತ್ತಿಗೆಯ ಕಾನೂನು ಸಮ್ಮತತೆ ಅಥವಾ ಅನ್ಯಥಾ ರೀತಿಯನ್ನು ತನಿಖೆ ಮಾಡುವುದಕ್ಕೆ ನಿರಾಕರಿಸಿರುತ್ತದೆ. ಆದುದರಿಂದಲೇ, ದೂರುದಾರನಿಗೆ ಒಂದು ಬಾರಿ ಮಾತ್ರವೇ ಪರಿಹಾರೋಪಾಯದ ಪುನರ್ ಪರಿಶೀಲನೆ / ಪುನರೀಕ್ಷಣೆ ಮುಂತಾದನ್ನು ಮಾಡಲು ಅವಕಾಶವಿರುತ್ತದೆ ಮತ್ತು ಈ ವ್ಯವಹರಣೆಯಲ್ಲಿ ದೂರುದಾರನು ಸೋತಿರುವಾಗ ಲೋಕಾಯುಕ್ತವು ದೂರುದಾರನ 'ಕುಂದುಕೊರತೆ'ಯ ಸಂಬಂಧದಲ್ಲಿ ಅಧಿನಿಯಮದ ಅಡಿಯಲ್ಲಿ ಯಾವುದೇ ತನಿಖೆಯನ್ನು ನಡೆಸಲು ಸಾಧ್ಯವಾಗದು ಎಂಬ ಅಂಶವು ಸದರಿ ಮೊಕದ್ದಮೆಯಲ್ಲಿ ನಿರ್ಣಯಿಸಲಾಗಿದೆ. ಪ್ರಸ್ತುತ ಮೊಕದ್ದಮೆಯಲ್ಲಿಯು ಆರೋಪ ಸ್ವರೂಪದಲ್ಲಿರುವ ದೂರಾಗಿದೆ, 2ನೇ ಪ್ರತ್ಯರ್ಜಿದಾರನಿಗೆ ವಿಚಾರಣೆ / ತನಿಖೆ

ನಡೆಸುವುದಕ್ಕೆ ಅಧಿಕಾರ ವ್ಯಾಪ್ತಿಯನ್ನು ನಿಹಿತವಾಗಿರುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಮೇಲೆ ಉಲ್ಲೇಖಿಸಿದ ಮೊಕದ್ದಮೆಯ ಸಂಗತಿಗಳು ಮತ್ತು ಪ್ರಸ್ತುತ ಮೊಕದ್ದಮೆಯ ಸಂಗತಿಗಳು ಸಂಪೂರ್ಣವಾಗಿ ವಿಭಿನ್ನತೆಯಿಂದ ಕೂಡಿದೆ.

16. ಈ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ***ಮಿಲಿಂದ ವಿದ್ಯಾ ಸಂಸ್ಥೆ (ನೋ) –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು*** ವರದಿಯಾಗದಿರುವ ಮೊಕದ್ದಮೆಯಲ್ಲಿನ ನಿರ್ಣಯವನ್ನು ಅರ್ಜಿದಾರರು ಅವಲಂಬನೆಯಾಗಿ ಉಲ್ಲೇಖಿಸಿರುವರು, ಲೋಕಾಯುಕ್ತ ಅಧಿನಿಯಮದ 12(1)ನೇ ಪ್ರಕರಣದ ಅಡಿಯಲ್ಲಿ ಜಾರಿ ಮಾಡಿದ ವರದಿಯ ಕಾನೂನು ಸಮ್ಮತತೆಯನ್ನು ಮತ್ತು ಸಿಂಧುತ್ವವನ್ನು ಪ್ರಶ್ನಿಸಲಾಗಿದೆ, ಇದರಲ್ಲಿ ಅರ್ಜಿದಾರ ವಿದ್ಯಾ ಸಂಸ್ಥೆಯು ವಿದ್ಯಾರ್ಥಿಗಳ ಪೋಷಕರಿಂದ ಸಂಗ್ರಹಿಸಿದ ಹೆಚ್ಚುವರಿ ಶುಲ್ಕವು ಕರ್ನಾಟಕ ಶಿಕ್ಷಣ ಅಧಿನಿಯಮದ 48ನೇ ಪ್ರಕರಣದ ಉಲ್ಲಂಘನೆಯಾಗಿದೆ. ಸಂಗ್ರಹಿಸಿದ ಹೆಚ್ಚುವರಿ ಶುಲ್ಕವನ್ನು ವಸೂಲಿ ಮಾಡುವುದಕ್ಕೆ ಆದೇಶಿಸಲಾಗಿದೆ. ಈ ಮೊಕದ್ದಮೆಯಲ್ಲಿ, ಬಾಧಿತ ಪೋಷಕರು ಈ ಬಗ್ಗೆ ಜಿಲ್ಲಾಧಿಕಾರಿಯವರು ಮುಖ್ಯಸ್ಥರಾಗಿರುವ ಜಿಲ್ಲಾ ನಿಯಂತ್ರಣ ಪ್ರಾಧಿಕಾರಕ್ಕೆ ಈಗಾಗಲೇ ದೂರನ್ನು ನೀಡಿರುತ್ತಾರೆ. ಈ ನ್ಯಾಯಾಲಯ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ, ಮುಂತಾದ) ನಿಯಮಗಳು, 1995ರ 15(2)ನೇ ನಿಯಮವನ್ನು ಗಮನಿಸಿ, ತರುವಾಯ ಸದರಿ ಮೊಕದ್ದಮೆಯ ಸಂಗತಿಗಳಿಗೆ ಅದನ್ನು ಅನ್ವಯಿಸಿದೆ ಮತ್ತು ಬಾಧಿತ ಪೋಷಕರಿಗೆ ನಿಶ್ಚಿತ ಪರಿಹಾರೋಪಾಯ ಲಭ್ಯವಾಗುವವರೆಗೂ, ಲೋಕಾಯುಕ್ತ ಅಧಿನಿಯಮದ 9(5)ನೇ ಪ್ರಕರಣದ ಮುಖಾಂತರ ಲೋಕಾಯುಕ್ತ ಮುಖ್ಯವಾಗಿ ವಿವೇಚನಾಯುಕ್ತ ಅಧಿಕಾರದೊಂದಿಗೆ ವ್ಯವಹರಿಸಲು ತಿಳಿಸಿದೆ, ಅಲ್ಲದೆ, ಅದೇ ಅಭಿಪ್ರಾಯೋಕ್ತಿಯಲ್ಲಿ ಮತ್ತು ಲೋಕಾಯುಕ್ತ ಅಧಿನಿಯಮದ 8(ಬಿ) ಪ್ರಕರಣದ ಅಡಿಯಲ್ಲಿ ಕುಂದುಕೊರತೆಯನ್ನು ಒಳಗೊಂಡ ದೂರಿನ ಮೊಕದ್ದಮೆಯನ್ನು ವಿಚಾರಣೆ ಮಾಡಲು ಪ್ರತಿಷೇಧಿಸಿದೆ ಮತ್ತು ಶಾಲೆಯ ಬಾಧಿತ ಪೋಷಕರು ಈಗಾಗಲೇ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಈ ಬಗ್ಗೆ ನೀಡಿದ ದೂರನ್ನು ಅಗತ್ಯಪಡಿಸಿದ ಕಾನೂನಿನ ಅಡಿಯಲ್ಲಿ ಪ್ರತ್ಯರ್ಜಿದಾರ

ಸಂಖ್ಯೆ: 6(ಎ) ಆಗಿರುವ ಜಿಲ್ಲಾ ನಿಯಂತ್ರಣ ಪ್ರಾಧಿಕಾರಕ್ಕೆ ತನಿಖೆ ನಡೆಸುವುದಕ್ಕೆ ನಿರ್ದೇಶಿಸಿದ ಅರ್ಜಿಯನ್ನು ಪುರಸ್ಕರಿಸಿದೆ.

17. ಲೋಕಾಯುಕ್ತ ಅಧಿನಿಯಮದ 9(5)ನೇ ಪ್ರಕರಣದ ಅಡಿಯಲ್ಲಿ ಲೋಕಾಯುಕ್ತರಿಗೆ ಅಥವಾ ಉಪಲೋಕಾಯುಕ್ತರಿಗೆ ಕುಂದುಕೊರತೆ ಅಥವಾ ಆಪಾದನೆ ಒಳಗೊಂಡಿರುವ ಯಾವುದೇ ದೂರನ್ನು ತನಿಖೆ ನಡೆಸುವುದಕ್ಕೆ ಅಥವಾ ತನಿಖೆಯನ್ನು ನಿಲ್ಲಿಸುವುದಕ್ಕೆ ಮತ್ತು ನಿರಾಕರಿಸುವ ವಿವೇಚನಾಧಿಕಾರವು ಅವರಿಗೆ ಇರುತ್ತದೆ. ಲೋಕಾಯುಕ್ತ ಅಧಿನಿಯಮದ 9(5)ನೇ ಪ್ರಕರಣವು ಈ ಮುಂದಿನಂತಿದೆ.

***9. ದೂರುಗಳು ಮತ್ತು ತನಿಖೆಗಳಿಗೆ ಸಂಬಂಧಿಸಿದ ಉಪಬಂಧಗಳು.–***

*(5) ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು, ದೂರು ಅಥವಾ ಆಪಾದನೆಯನ್ನೊಳಗೊಂಡ ಯಾವುದೇ ಫಿರ್ಯಾದಿನ ಸಂಬಂಧದಲ್ಲಿ,–*

*(ಎ) ಆ ಫಿರ್ಯಾದು ಕ್ಷುಲ್ಲಕವೆಂದು ಅಥವಾ ಕಿರುಕುಳಕಾರಿಯೆಂದು ಅಥವಾ ಸದುದ್ದೇಶದಿಂದ ಸಲ್ಲಿಸಿದುದಲ್ಲವೆಂದು; ಅಥವಾ*

*(ಬಿ) ತನಿಖೆ ನಡೆಸುವುದಕ್ಕೆ ಅಥವಾ ಸಂದರ್ಭಾನುಸಾರ ತನಿಖೆಯನ್ನು ಮುಂದುವರಿಸಲು ಸಾಕಷ್ಟು ಕಾರಣಗಳಿಲ್ಲವೆಂದು; ಅಥವಾ*

*(ಸಿ) ಫಿರ್ಯಾದಿಗೆ ಇತರ ಪರಿಹಾರೋಪಾಯಗಳಿವೆಯೆಂದು ಮತ್ತು ಆ ಪ್ರಕರಣದ ಸನ್ನಿವೇಶಗಳಲ್ಲಿ ಫಿರ್ಯಾದಿಯು ಅಂಥ ಪರಿಹಾರೋಪಾಯಗಳನ್ನು ಪಡೆಯುವುದು ಹೆಚ್ಚು ಸೂಕ್ತವೆಂದು ಅಭಿಪ್ರಾಯ ಪಟ್ಟರೆ, ತನ್ನ ವಿವೇಚನಾನುಸಾರ ಅವನು ಆ ಫಿರ್ಯಾದಿನ ತನಿಖೆ ನಡೆಸಲು ನಿರಾಕರಿಸಬಹುದು ಅಥವಾ ತನಿಖೆಯನ್ನು ನಿಲ್ಲಿಸಬಹುದು.*

18. ಲೋಕಾಯುಕ್ತ ಅಧಿನಿಯಮದ 9(5)ನೇ ಪ್ರಕರಣವು ವಿವೇಚನಾಧಿಕಾರದ ಬಗ್ಗೆ ವ್ಯವಹರಿಸುತ್ತದೆ. ಪ್ರಸಕ್ತ ಮೊಕದ್ದಮೆಯಲ್ಲಿ ದೂರಿನಲ್ಲಿರುವ ದೃಢೋಕ್ತಿಯನ್ನು ಪರಿಗಣಿಸಿ, ಪ್ರತ್ಯರ್ಜಿದಾರ ಸಂಖ್ಯೆ:1 ಮತ್ತು 2ರ ಮೇಲೆ ವಿಚಾರಣೆ ನಡೆಸಿದ ಪ್ರಕ್ರಿಯೆಯ ಕ್ರಮವನ್ನು ಕಾನೂನುಬಾಹಿರವೆಂದು ಅಥವಾ ಅಧಿಕಾರ ವ್ಯಾಪ್ತಿಯ ಹೊರತಾದುದು ಎಂದು ಹೇಳಲು ಬರುವುದಿಲ್ಲ. ದೂರಿನಲ್ಲಿ ಮಾಡಲಾದ ಆಪಾದನೆಗಳು ಸತ್ಯವೆಂದು ಅಥವಾ ಸುಳ್ಳೆಂದು ಖಚಿತಪಡಿಸಿಕೊಳ್ಳುವುದು ವಿಚಾರಣೆಯ ವ್ಯಾಪ್ತಿಯಾಗಿರುತ್ತದೆ.

19. ***ಟಿ.ಎನ್. ರವಿ ಪ್ರಕಾಶ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು*** ಮೊಕದ್ದಮೆಯಲ್ಲಿ ಪರಿಗಣಿಸಿದ ಅಂತಹದೇ ಪ್ರಶ್ನೆಗಳನ್ನು, ಈ ನ್ಯಾಯಾಲಯವು ದೂರಿನಲ್ಲಿರುವ ಆಪಾದನೆಯು ಲೋಕಾಯುಕ್ತ ಅಧಿನಿಯಮದ 2(2)ನೇ ಪ್ರಕರಣದಲ್ಲಿ ಪರಿಭಾಷಿಸಿದ ಆಪಾದನೆಗೆ ಅನ್ವಯವಾಗುವುದಿಲ್ಲ ಮತ್ತು ಅಧಿನಿಯಮದ 8ನೇ ಪ್ರಕರಣದ (1)ನೇ ಉಪಪ್ರಕರಣದ ಪ್ರಕಾರದಂತೆ ಆಪಾದನೆ ಒಳಗೊಂಡ ಯಾವುದೇ ದೂರಿನ ಸಂಬಂಧದಲ್ಲಿಯು ಅನ್ವಯವಾಗುವುದಿಲ್ಲ.

20. ***ಶ್ರೀ ಜಯಪ್ರಕಾಶ್ .ಕೆ –ವಿರುದ್ಧ– ಕರ್ನಾಟಕ ರಾಜ್ಯ (ಕಾರ್ಯದರ್ಶಿ, ಪಂಚಾಯತ್ ಮತ್ತು ಗ್ರಾಮೀಣಾಭಿವೃದ್ಧಿ) ಮತ್ತು ಇತರರು*** ಮೊಕದ್ದಮೆಯಲ್ಲಿ, ಈ ನ್ಯಾಯಾಲಯ, ಅರ್ಜಿದಾರ / ಸರ್ಕಾರಿ ನೌಕರನ ವಿರುದ್ಧ ದುರ್ನಡತೆಯ ಆಪಾದನೆಯ ಸಂಬಂಧದಲ್ಲಿ ಶಿಸ್ತು ಕ್ರಮದ ವಿಚಾರಣೆಯನ್ನು ನಡೆಸುವುದಕ್ಕೆ ಲೋಕಾಯುಕ್ತ ಅಧಿನಿಯಮದ 12(3)ನೇ ಪ್ರಕರಣದ ಅಡಿಯಲ್ಲಿ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುವುದನ್ನು ಗಮನಿಸಿದೆ ಮತ್ತು ಮುಂದುವರೆದ ವರದಿಯಲ್ಲಿ 1957ರ ನಿಯಮಗಳ 14ಎ(2)(ಎ) ನಿಯಮದ ಅಡಿಯಲ್ಲಿ, ವರದಿಯು ವಿಚಾರಣೆಯನ್ನು ನಡೆಸುವುದಕ್ಕೆ ಅಧಿಕಾರ ವ್ಯಾಪ್ತಿ ಇಲ್ಲವೆಂದು ಹೇಳಬಾರದು ಮತ್ತು ಅದು ಅರ್ಜಿದಾರನ ಯಾವುದೇ ಕಾನೂನು ಸಮ್ಮತ ಹಕ್ಕಿಗೆ ಬಾಧಕ ಉಂಟು ಮಾಡಬಾರದು ಮತ್ತು ರಾಜ್ಯ ಸರ್ಕಾರವು ಅರ್ಜಿದಾರನ ವಿರುದ್ಧ ಆಪಾದಿಸಲಾದ ದುರ್ನಡತೆಯ

ಸಂಬಂಧದಲ್ಲಿ ಆದೇಶಿಸಿದ ವಿಚಾರಣೆಯನ್ನು ಅರ್ಜಿದಾರನು ಯುಕ್ತವಾಗಿ ಎದುರುಗೊಳ್ಳಬೇಕೆಂದು ನ್ಯಾಯಾಲಯವು ನಿರ್ಣಯಿಸಿದೆ.

21. ಮೇಲೆ ಮಾಡಲಾದ ಚರ್ಚೆಯ ಹಿನ್ನೆಲೆಯಲ್ಲಿ, ನಮಗೆ ಭಾರತದ ಸಂವಿಧಾನದ 226ನೇ ಅನುಚ್ಛೇದದ ಅಡಿಯಲ್ಲಿ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿ ಈ ಮೊಕದ್ದಮೆಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಕಾರಣಗಳು ಕಂಡುಬರುತ್ತಿಲ್ಲ.

ತದನುಸಾರವಾಗಿ ಈ ರಿಟ್ ಅರ್ಜಿಯನ್ನು **ಯಾವುದೇ ಗುಣಾರ್ಹತೆ ಹೊಂದಿಲ್ಲವೆಂದು ಅರ್ಜಿಯನ್ನು ವಜಾಗೊಳಿಸಲಾಗಿದೆ**.

ವೆಚ್ಚಗಳಿಗೆ ಆದೇಶವಿಲ್ಲ.